

**ಎಡದಿಂದ ಬಲಕ್ಕೆ**

1. ಉದ್ಯೋಗದಲ್ಲಿ ಸಂತೃಪ್ತಿ ಸಿಗಲಿಲ್ಲವೆಂದು ಅವನ ಈ ದುಃಖ 3
3. ಸರಾಗವಾದ ಓಡಾಟಕ್ಕಾಗಿ ನಿರ್ಮಿಸಿದ್ದು ಈ ನೆಲ ಕೊರೆದ ಹಾದಿ 3
4. ಸಂದರ್ಭಕ್ಕೆ ತಕ್ಕಂತೆ ಹೊಂದಿ ನಡೆಯಬೇಕೆಂಬುದು ಕಟ್ಟಪ್ಪಣೆ 3
6. ಲಾಭ ಗಳಿಸುವ ಈ ಸಂಕೀರ್ಣ ಕ್ರಮವನ್ನು ಸರಳಗೊಳಿಸು 4
7. ನದಿಗೆ ಬಿದ್ದವನನ್ನು ರಕ್ಷಿಸಿದವನಿಗೆ ಆಭರಣವನ್ನು ಸುಮ್ಮನೇ ನೀಡಿದ್ದು 4
9. ನ್ಯಾಯಾಂಗದಿಂದ ಬಂದ ಆಜ್ಞೆಯ ಕಾರಣ ಯೋಜನೆ ಅನಿಶ್ಚಿತವಾಗಿದೆ 4
11. ಸಾವಿಗೆ ಅಂಜದವನನ್ನು ಕುರಿತ ಮಧುರ ಹಾಡು 4
15. ಮಾತಿಲ್ಲ, ಕತೆಯಿಲ್ಲ; ಇದೆಂತಹ ಸಮರ? 3
16. ಜನಗಣಮನ ಹಾಡುತ್ತಿರುವವರ ಸಂಖ್ಯಾ ಎಣಿಕೆ 3
17. ವ್ಯಾಪಾರ ಕುದುರಿಸಿದವನ ಬಣ್ಣ ಎಂಥ ಕಪ್ಪು! 3

**ಮೇಲಿನಿಂದ ಕೆಳಕ್ಕೆ**

1. ಆಪ್ತ ಸಂಗಾತಿಗೆ ಒದಗಿದ ದುಸ್ಥಿತಿ ಕುರಿತ ವಿಷಯ ಏನು? 3
2. ಆತನ ಪುತ್ರನ ಕೈಯಲ್ಲೇಕೆ ಬಂತು ಈ ಬಾವುಟ? 3
3. ಸಮಾರಂಭದ ಸ್ಥಳದ ತುಂಬ ಎಂಥ ಸುವಾಸನೆ! 3
5. ತುಂಡುಡುಗೆಯ ಮಾರುವೇಷ ಧರಿಸಿ ಬಂದವ ಒಬ್ಬ ಕಳ್ಳ 3
6. ಸ್ವಾಮಿಯನ್ನು ದರ್ಶಿಸಿ ಬಂದಾಗಿನಿಂದ ಹೀಗೊಂದು ಸಂತಸ 3
8. ಮಾಸಾಶನವನ್ನು ಮಂಜೂರು ಮಾಡಿದ್ದಕ್ಕೆ ಗೌರವದ ವಂದನೆ 3
10. ತೇರಿಗೆಂದೇ ಬಂದವರನ್ನು ಪತ್ತೆಹಚ್ಚುವ ಚಿನ್ಹೆ ಏನು? 3
12. ಎಲ್ಲರ ಬಳಿಯೂ ವಿನೀತರಾಗಿ ವರ್ತಿಸಬೇಕೆಂದು ಕೋರಿಕೆ 3
13. ಎಲ್ಲರೂ ತೆರಳಿದ ನಂತರ ಬಂದ ನೋಡಿ ಈ ಪುಟ್ಟ ಹುಡುಗ 3
14. ಗೆದ್ದು ಬಂದವನನ್ನು ಪ್ರೋತ್ಸಾಹಿಸಲು ಈ ನೇರ ಹಣ 3

---

**10–08–2023 ಉತ್ತರಗಳು**

**ಎಡದಿಂದ ಬಲಕ್ಕೆ**

1. ಅಧ್ಯಯನ 3. ವಿಕೋಪ 4. ವರ್ತಕ 6. ಕನವರ 7. ತಳಹದಿ 9. ಯಕ್ಷಲೋಕ 12. ಕಾಳಧನ 14. ವಂಚಕ 15. ಕಳಂಕ 16. ತರಗೆಲೆ

**ಮೇಲಿನಿಂದ ಕೆಳಕ್ಕೆ**

1. ಅಪಕಾರ 2. ನವನೀತ 3. ವಿಧಾನ 5. ಕಲಹ 6. ಕಲಾಮಯ 8. ದಿಟ್ಟತನ 10. ಕ್ಷಣಿಕ 11. ಕಲಾವಿದ 12. ಕಾಷ್ಠಕಲೆ 13. ಧನಿಕ

ಪ್ರಶ್ನಾಂಕಣ

# ಕ್ಯಾರಟ್ ಎಂದರೇನು?

ಕ್ಯಾರಟ್; ಇದು ತುಂಬ ಬಳಕೆಯಲ್ಲಿರುವ ಒಂದು ಆಂಗ್ಲ ಹೆಸರು. ವಿಶೇಷ ಏನೆಂದರೆ, ಇದೇ ಉಚ್ಚಾರಣೆಯ ಆದರೆ ಅರ್ಥದಲ್ಲೂ, ಅನ್ವಯದಲ್ಲೂ ವಿಭಿನ್ನವಾಗಿರುವ ಮೂರು ಪದಗಳು ಇಂಗ್ಲಿಷ್ ಭಾಷೆಯಲ್ಲಿವೆ: Carrot, Karat ಮತ್ತು Carat. ಇವುಗಳ ಅರ್ಥ ಮತ್ತು ವ್ಯತ್ಯಾಸಗಳು ತುಂಬ ಕುತೂಹಲಕರ; ಅಷ್ಟೇ ಆಸಕ್ತಿದಾಯಕ ಕೂಡ. ನೀವೇ ಗಮನಿಸಿ:

ಕ್ಯಾರೆಟ್ (Carrot): ಇದು ಜಗದಾದ್ಯಂತ ಬಹಳ ಜನಪ್ರಿಯವಾಗಿರುವ ಮತ್ತು ಭಾರೀ ಪ್ರಮಾಣದಲ್ಲಿ ಬಳಕೆಯಲ್ಲಿರುವ ಒಂದು ತರಕಾರಿ. ಕಿತ್ತಳೆ ಬಣ್ಣದ ಈ ತರಕಾರಿಯದು ತುಂಬ ಹಿತಕರ ಸ್ವಾದ ಮತ್ತು ರುಚಿ. ಮೂಲತಃ ಪರ್ಷಿಯಾ ಮತ್ತು ಆಫ್ಘಾನಿಸ್ಥಾನದ ಮೂಲಕ ಭಾರತಕ್ಕೆ ಬಂದ ಕ್ಯಾರೆಟ್ ಪ್ರಸ್ತುತ ಒಂದು ಪ್ರಧಾನ ಕೃಷಿ ಬೆಳೆ ಆಗಿದೆ. ಕ್ಯಾರೆಟ್ ಉತ್ಪಾದನೆಯಲ್ಲಿ ಜಗತ್ತಿನಲ್ಲಿ ನಮ್ಮ ದೇಶದ್ದು ದ್ವಿತೀಯ ಸ್ಥಾನ. ನಮ್ಮಲ್ಲಿನ ವಾರ್ಷಿಕ ಉತ್ಪಾದನೆ ಒಂದು ದಶಲಕ್ಷ ಟನ್ (ಎಂದರೆ 100 ಕೋಟಿ ಕಿ.ಗ್ರಾಂ).

ಕ್ಯಾರಟ್ (Karat): ಇದು ಆಭರಣಗಳಲ್ಲಿ ಬಂಗಾರದ ಪರಿಶುದ್ಧತೆಯ ಪ್ರಮಾಣವನ್ನು ಸೂಚಿಸುವ ಮಾನ. ಯಾವುದೇ ಒಂದು ಚಿನ್ನಾಭರಣದ ಮೇಲೆ ಸೂಚಿಸಲಾದ ಕ್ಯಾರಟ್ ಸಂಖ್ಯೆ ಆ ಆಭರಣದ ಒಟ್ಟು ತೂಕದ 24 ಭಾಗಗಳಲ್ಲಿ ಎಷ್ಟು ಭಾಗ ಪರಿಶುದ್ಧ ಬಂಗಾರ ಇದೆ ಎಂಬುದನ್ನು ತಿಳಿಸುತ್ತದೆ. 24 ಕ್ಯಾರಟ್ ಚಿನ್ನ ಎಂದರೆ ಅತ್ಯಂತ ಪರಿಶುದ್ಧ ಬಂಗಾರ ಎಂದರ್ಥ. 22 ಕ್ಯಾರಟ್ ಚಿನ್ನ ಎಂದರೆ ಆ ಚಿನ್ನದಲ್ಲಿ ಪ್ರತಿ 24 ಭಾಗಗಳಲ್ಲಿ 22 ಭಾಗ ಅಪ್ಪಟ ಚಿನ್ನ ಮತ್ತು ಉಳಿದ ಎರಡು ಭಾಗ ತಾಮ್ರ ಬೆರೆತಿದೆ ಎಂದರ್ಥ. ಹಾಗೆಯೇ 18 ಕ್ಯಾರಟ್ ಚಿನ್ನದಲ್ಲಿ ಪ್ರತಿ 24 ಭಾಗದಲ್ಲಿ 6 ಭಾಗ ತಾಮ್ರ ಇರುತ್ತದೆ. ಪರಿಶುದ್ಧ ಚಿನ್ನ ಬಹಳ ಮೃದುವಾದ ಲೋಹವಾದ್ದರಿಂದ ಆಭರಣಗಳನ್ನು ತಯಾರಿಸಲು 22 ಕ್ಯಾರಟ್ ಅಥವಾ 18 ಕ್ಯಾರಟ್ ಬಂಗಾರವನ್ನೇ ಬಳಸಲಾಗುತ್ತದೆ.




ಕ್ಯಾರಟ್ (Carat): ಇದು ವಜ್ರ ಮತ್ತಿತರ ರತ್ನಗಳ ಹರಳುಗಳ ತೂಕವನ್ನು ಸೂಚಿಸುವ ಅಳತೆಯ ಮಾನ. ರತ್ನಗಳ ಹರಳುಗಳದು ಸಾಮಾನ್ಯವಾಗಿ ಒಂದು ಗ್ರಾಂಗೂ ಕಡಿಮೆ ತೂಕ. ಹಾಗಾಗಿ ಆಭರಣಗಳಲ್ಲಿ ಬಳಸುವ ವಜ್ರ ಮತ್ತಿತರ ರತ್ನ ಮಣಿಗಳ ತೂಕವನ್ನು ಕ್ಯಾರಟ್‌ಗಳಲ್ಲಿ ಅಳೆಯಲಾಗುತ್ತದೆ. ಒಂದು ಕ್ಯಾರಟ್ ತೂಕ 200 ಮಿಲಿ ಗ್ರಾಂಗೆ ಸಮ. ಒಂದು ಗ್ರಾಂ ತೂಕ 1000 ಮಿಲಿ ಗ್ರಾಂಗೆ ಸಮನಾದ್ದರಿಂದ ಒಂದು ಗ್ರಾಂ ಐದು ಕ್ಯಾರಟ್‌ಗೆ ಸಮನಾಗುತ್ತದೆ. ಕೆಲವು ರಾಷ್ಟ್ರಗಳಲ್ಲಿ Carat ಅನ್ನೇ ಬಂಗಾರದ ಪರಿಶುದ್ಧತೆಯನ್ನು ಸೂಚಿಸಲು ಕೂಡ ಬಳಸುವ ಪರಿಪಾಟ ಇದೆ.

■ ಎನ್. ವಾಸುದೇವ್